ಊಟ ಸಿದ್ಧವಾಯಿತು. ಅಂಗಳದಲ್ಲಿ ಎಲೆ ಹಾಕಿದರು. ಅತಿಥಿಗಳು ಊಟ ಮಾಡಲಾರಂಭಿಸಿದರು. ಊಟ ಮಾಡುವಾಗ ಹೆಂಗಸರು ಪದ ಹೇಳಿದರು. ಅತಿಥಿ, ಆಳು ಎಲ್ಲರೂ ಊಟಕ್ಕೆ ಕುಳಿತಿದ್ದರು. ಕೆಲವರದ್ದು ಊಟ ಆಗಿದ್ದರೂ ದೊಡ್ಡವರು ಏಳದೆ ಏಳಬಾರದೆಂಬ ಸಭ್ಯತೆಯಿಂದ ಹಾಗೆಯೇ ಕುಳಿತಿದ್ದರು. ಓದಿದ ಈ ಕಾಲದವರು ಸೇವಕರ ಈ ದೀರ್ಘಾಹಾರದಿಂದ ಬೇಸರಗೊಳ್ಳುತ್ತಿದ್ದರು.

ಮುದಿಚಿಕ್ಕಮ್ಮ ಕೋಣೆಗೆ ಹೋಗಿ 'ನಾನು ಏಕಾದರೂ ಅಲ್ಲಿಗೆ ಹೋದೆ' ಎಂದು ಪಶ್ಚಾತ್ತಾಪಪಡುತ್ತಿದ್ದಳು. ಅವಳಿಗೆ ರೂಪಳ ಮೇಲೆ ಕೋಪ ಬರಲಿಲ್ಲ. ತನ್ನ ಆತುರದ ಬಗ್ಗೆ ಬೇಸರವಾಗಿತ್ತು. ನಿಜ, ಅತಿಥಿಗಳ ಊಟವಾಗದೆ ಮನೆಯವರು ಊಟ ಮಾಡಲು ಸಾಧ್ಯವೆ? ಎಲ್ಲರ ಎದುರಿಗೂ ಮರ್ಯಾದೆ ಹೋಯಿತು. ಇನ್ನು ಕರೆಯುವುದಕ್ಕೆ ಯಾರಾದರೂ ಬಂದ ಹೊರತು ನಾನು ಹೋಗುವುದಿಲ್ಲ ಎಂದು ನಿಶ್ಚಯಿಸಿದಳು.

ಮನಸ್ಸಿನಲ್ಲಿ ಹೀಗೆಯೇ ಯೋಚಿಸುತ್ತಾ 'ಕರೆ'ಯನ್ನೇ ನಿರೀಕ್ಷಿಸುತ್ತಾ ಕುಳಿತಳು. ಆದರೆ ತುಪ್ಪದ ವಾಸನೆ ಅವಳ ಧೈರ್ಯವನ್ನು ಪರೀಕ್ಷಿಸುತ್ತಿತ್ತು. ಒಂದೊಂದು ಕ್ಷಣವೂ ಒಂದೊಂದು ಯುಗವಾಗತೊಡಗಿತು. ಇಷ್ಟು ಹೊತ್ತಿಗೆ ಎಲೆ ಹಾಕಿರಬಹುದು. ಅತಿಥಿಗಳು ಊಟಕ್ಕೆ ಕುಳಿತಿರಬಹುದು. ಹೆಂಗಸರು ಪದ ಹೇಳುತ್ತಿರಬಹುದು. ಹೀಗೆ ಯೋಚಿಸುತ್ತಾ ಮನಸ್ಸನ್ನು ಸಮಾಧಾನಗೊಳಿಸಲು ಮಲಗಿದಳು. ಮೆಲ್ಲಗೆ ಒಂದು ಹಾಡನ್ನೂ ಗೊಣಗುಟ್ಟತೊಡಗಿದಳು. ಹಾಡುತ್ತಾ ಎಷ್ಟೋ ಹೊತ್ತು ಕಳೆದಳು. ಇಷ್ಟು ಹೊತ್ತಾದರು ಯಾರೂ ಕರೆಯಲು ಬರಲೇ ಇಲ್ಲವಲ್ಲ! ಏನೂ ಶಬ್ದವೇ ಕೇಳುತ್ತಿಲ್ಲ! ಎಲ್ಲರೂ ಊಟ ಮುಗಿಸಿ ಹೊರಟುಹೋಗಿರಬಹುದು. ನನ್ನನ್ನು ಯಾರೂ ಕರೆಯಲು ಬರಲಿಲ್ಲ. ರೂಪಳಿಗೆ ಕೋಪ ಬಂದಿದೆ. ಅದಕ್ಕೆ ಅವಳು ಬಂದಿಲ್ಲ. ನಾನೇನೂ ಅತಿಥಿ ಅಲ್ಲವಲ್ಲ, ತಾನಾಗಿಯೇ ಬರಲಿ ಎಂದು ಅವಳು ಸುಮ್ಮನಿರಬಹುದು. ಮುದಿಚಿಕ್ಕಮ್ಮ ತಾನಾಗಿಯೇ ಹೊರಟಳು. ಖಂಡಿತ ಇನ್ನು ಕೆಲವೇ ನಿಮಿಷಗಳಲ್ಲಿ ಪೂರಿ, ಮಸಾಲೆ ಹಾಕಿದ ತರಕಾರಿ ಪಲ್ಯ ನನ್ನ ಮುಂದೆ ಬರುತ್ತದೆ. ಇದನ್ನು ನೆನೆಪಿಸಿಕೊಳ್ಳುತ್ತಿದ್ದ ಹಾಗೆಯೇ ಅವಳಿಗೆ ಖುಷಿಯಾಗತೊಡಗಿತು. ಮನಸ್ಸಿನಲ್ಲಿ ಮಂಡಿಗೆ ತಿನ್ನತೊಡಗಿದಳು. ಮೊದಲು ಪಲ್ಯದಲ್ಲಿ ನೆಂಜಿಕೊಂಡು ತಿನ್ನುತ್ತೇನೆ. ಆಮೇಲೆ ಸಕ್ಕರೆ ಹಾಕಿಕೊಂಡು ತಿನ್ನುತ್ತೇನೆ. ಕರ್ಜಿಕಾಯಿಗೆ ರಾಯತ ಸೇರಿಸಿಕೊಂಡು ತಿಂದರೆ ತುಂಬ ಚೆನ್ನಾಗಿರುತ್ತೆ. ಯಾರು ಏನು ಬೇಕಾದರು ತಿಳಿದುಕೊಳ್ಳಲಿ. ನಾನಂತೂ ಕೇಳಿಕೇಳಿ ಹಾಕಿಸಿಕೊಳ್ಳುತ್ತೇನೆ. ಜನ ಏನಾದರೂ ಅಂದುಕೊಳ್ಳಲಿ. ಇಷ್ಟು ದಿನಗಳ ಮೇಲೆ ಪೂರಿ ಸಿಗುತ್ತಿದೆ. ಬಾಯಿ ಎಂಜಲು ಮಾಡಿ ನಾನಂತೂ ಏಳುವುದಿಲ್ಲ.

ಮೆಲ್ಲಗೆ ಕೈ ಊರಿಕೊಂಡು ಪುನಃ ಅಂಗಳಕ್ಕೆ ಬಂದಳು. ಅಯ್ಯೊ ದುರ್ಭಾಗ್ಯವೆ? ಆಸೆಯ ಆ ಹಳೆಯ ಸ್ವಭಾವ ಕಾಲದ ಕಲ್ಪನೆಯನ್ನು ತಪ್ಪಾಗಿ ಮಾಡಿತ್ತು. ಅತಿಥಿಗಳು ಇನ್ನೂ ಕುಳಿತೇ ಇದ್ದರು. ಕೆಲವರು ತಿಂದು ಬೆರಳು ನೆಕ್ಕುತ್ತಿದ್ದರು. ಕೆಲವರು ಬೇರೆಯವರು ತಿಂದಾಯಿತೋ, ಇಲ್ಲವೋ ಎಂದು ಓರೆಗಣ್ಣಿನಿಂದ ನೋಡುತ್ತಿದ್ದರು. ಕೆಲವರು ಮೊಸರು ತಿಂದು, ಚಪ್ಪರಿಸುತ್ತಾ ಇನ್ನೊಂದು ದೊನ್ನೆ ಕೇಳಲು ಸಂಕೋಚಪಡುತ್ತಿದ್ದರು. ಅಷ್ಟರಲ್ಲಿ ಮುದುಕಿ ತೆವಳಿಕೊಂಡು ಅವರ ಮಧ್ಯೆ ಬಂತು. ಕೆಲವರು ಬೆಚ್ಚಿ ಎದ್ದು ನಿಂತು, 'ಅಯ್ಯೊಯ್ಯೋ ಈ ಮುದುಕಿ ಎಲ್ಲಿಂದ ಬಂತು? ಯಾರಿದು? ಎಲೆ ಮುಟ್ಟದ ಹಾಗೆ ನೋಡಿಕೊಳ್ಳಿ' ಎಂದು ಕಿರುಚಿದರು.

ಪಂಡಿತ ಬುದ್ಧಿರಾಮನಿಗೆ ಮುದಿಚಿಕ್ಕಮ್ಮನನ್ನು ನೋಡಿದ ಕೂಡಲೆ ಕೋಪ ಉಕ್ಕಿ ಬಂತು.